ಹೀಗೆ ವಾರ ಕಳೆದಂತೆ ಸಾವಿತ್ರಿಯ ಮನೆಗೆಲಸದಾಕೆಯ ಕನಸೂ ಕಮರಿತು. ಶಿವಮ್ಮ ಬರುವ ಹಾಗೆ ಬಂದು ಈಗ ಬಾರದೆ ಇದ್ದುದರಿಂದ ಆದ ಅವಮಾನದಿಂದ ಮನಸ್ಸು ಇನ್ನೂ ಜರ್ಜರಿತವಾಗಿ ಬದುಕು ದುಸ್ತರವೆನಿಸಿತು. ಒಂದು ಮುಂಜಾನೆ ಸಾವಿತ್ರಿ ಎಚ್ಚರಗೊಂಡಿದ್ದರೂ ಇನ್ನು ಹಾಸಿಗೆಯಿಂದ ಎದ್ದಿರಲಿಲ್ಲ. ಅಷ್ಟರಲ್ಲೆ ಪಕ್ಕದ ಮನೆಯಾಕೆ ಯಾರ ಜೊತೆಯಲ್ಲೋ ಮಾತಿಗಿಳಿದಿರುವುದು ಕೇಳಿಸಿತು. ಅತ್ತ ಗ್ಯಾನ ಕೊಡಲಾಗಿ ಪಕ್ಕದ ಮನೆಯ ಗಂಗಮ್ಮಾಂಟಿಯೊಂದಿಗೆ ಮಾತಿಗಿಳಿದಿರುವುದು ಬೇರೆ ಯಾರೂ ಅಲ್ಲ ಅದೆ ಮನೆಗೆಲಸದ ಶಿವಮ್ಮ! ಕುತೂಹಲಿಯಾದ ಸಾವಿತ್ರಿ ಅವರ ಪ್ರತಿ ಮಾತಿಗೂ ಕಿವಿಯಾದಳು.

ವಾರದ ಕೆಳಗಷ್ಟೆ ಅವಳಿ ಮಕ್ಕಳನ್ನು ಹೆತ್ತ ಸೊಸೆಯನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿಸಿಕೊಂಡು ಮನೆಗೆ ಕರೆದುಕೊಂಡು ಬಂದಿದ್ದ ಗಂಗಮ್ಮಾಂಟಿ ಮಗ ಬಾಣ್ತಿ ನೋಡ್ಕಣದು ಕಷ್ಟಾಗುತ್ತೆ, ಸೊಸೆ ಎದ್ದು ಎಲ್ಲ ಮಾಡ್ಕೆಣಂಗಾಗತಕ ಒಬ್ಬುನ್ನ ಮನೆಗೆಲಸಕ್ಕೆ ಸೇರಿಸಿಕೊಳ್ಳಣ, ಅವ್ರು ಬಟ್ಟೆ ಗಿಟ್ಟೆ ತೊಳ್ಕೊಟ್ರೆ ನಾನು ಒಳಗೆ ಮಾಡ್ಕೆಂಬಹುದು ಎಂದು ತೀರ್ಮಾನಿಸಿ ಅದೇ ಮನೆಗೆಲಸದ ಶಿವಮ್ಮನ ಜೊತೆ ಮಾತಿಗಿಳಿದಿದ್ದಳು. ಗಂಗಮ್ಮಾಂಟಿ ಅದೇನೇನು ಕಂಡಿಷನ್ ಹಾಕಿದ್ಲೊ ಶಿವಮ್ಮನ ಮಾತಿನ ಸರ್ದಿ ಬಂದಾಗ... 'ಇಲ್ಲ ಬಿಡ್ರಿ ಅಕ್ಕರೆ ಬೆಳಿಗ್ಗೆ ಸಂಜೆ ಎರೆಡು ಟೈಮೂ ಬಂದು ಮಗಿನ ಬಟ್ಟೆನೆಲ್ಲ ನೀಟಗೆ ತೊಳೆದು ಘಮ ಘಮ ಅನ್ನಂಗೆ ಮಾಡ್ಕೊಡ್ತಿನಿ, ಪಾತ್ರೆನು ಅಷ್ಟೆ, ಫಳ ಫಳ ಹೊಳೆಯಂಗೆ ಬೆಳಗಿ ಕೊಡ್ತಿನಿ, ನೀವು ಕೊಡ ಒಂದುವರೆ ಸಾವ್ರ ದೊಡ್ಡದಲ್ಲ, ನನ್ನ ಕೆಲ್ಸ ನೋಡಿ ಆಮೇಲೆ ಮಾತಾಡ್ರಿ' ಎನ್ನುತ್ತಿದ್ದಳು. ಇದೆಲ್ಲವನ್ನು ಇಂಚಿಂಚೂ ಕೇಳಿಸಿಕೊಂಡ ಸಾವಿತ್ರಿ ಆಘಾತಕ್ಕೊಳಗಾದಳು.

ಇನ್ನ ಮಾರನೆ ದಿನ ಸಾವಿತ್ರಿ ಎದ್ದು ಆಚೆ ಬರುವಷ್ಟರಲ್ಲಿ ಶಿವಮ್ಮ ತನ್ನ ಕೆಲಸ ಮುಗಿಸಿಕೊಂಡು ಹೋಗಿಯೇ ಬಿಟ್ಟಿದ್ದಳು. ಅವಳು ತೊಳೆದು ಒಣಗಲು ಹಾಕಿದ್ದ ಮಗಿನಡಿಯ ಬಟ್ಟೆಗಳು ನೇತಾಡುತ್ತಿದ್ದವು. ಎಷ್ಟೋ ಸಲ ಶಿವಮ್ಮ ಪಕ್ಕದ ಮನೆಗೆ ಬಂದಿದ್ದಾಳೆಂದು ಗೊತ್ತಾದರೆ ಸ್ವತಃ ಸಾವಿತ್ರಿಯೇ ಆಚೆ ಬರದೆ ಅವಳು ಹೋಗುವಷ್ಟೂ ಕಾಲ ಒಳಗೇ ಸೇರಿಕೊಂಡು ಮುಜುಗರದಿಂದ ತಪ್ಪಿಸಿಕೊಳ್ಳುತ್ತಿದ್ದಳು. ಒಮ್ಮೆ ಟೆರೇಸ್ ಮೇಲಿನ ಗಿಡಗಳಿಗೆ ನೀರು ಹಾಕಲೆಂದು ಸಾವಿತ್ರಿ ಮೆಟ್ಟಿಲು

